ಆ)	ಹಾಗಿದ್ದಲ್ಲಿ, ಹಣ ಮಂಜೂರು ಮಾಡಲಾಗುವುದೇ?	ಸದರಿ ದೇವಾಲಯಗಳಿಂದ ಜೋಣೋರ್ದ್ಧಾರ ಕಾಮಗಾರಿ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಲ್ಲಿ, ಆ ಬಗ್ಗೆ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೭೮ (೧೮೫೧)

ಸದಸ್ಯರ ಹೆಸರು ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸುವ ಸಚಿವರು ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕೆ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಿಂದ ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕಾ ಬೆಳೆಗಳಿಗೆ ಉತ್ತೇಜನ ನೀಡಲಾಗುತ್ತಿದೆ ?	ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಿಂದ ಕೆಳಕಂಡ ಜಿಲ್ಲೆಗಳಲ್ಲಿ ತೋಟಗಾರಿಕಾ ಬೆಳಗಳಿಗೆ ಉತ್ತೇಜನ ನೀಡಲಾಗುತ್ತಿದೆ ೧ ಬೆಂಗಳೂರು (ಗ್ರಾಮಾಂತರ) ೧೦ ಕೊಪ್ಪಳ ೨ ತುಮಕೂರು ೧೧ ಹಾಸನ ೩ ಮೈಸೂರು ೧೨ ಗುಲ್ಬರ್ಗಾ ೪ ಕೋಲಾರ ೧೩ ಉತ್ತರ ಕನ್ನಡ ೫ ಚಿತ್ರದುರ್ಗ ೧೪ ದಕ್ಷಿಣ ಕನ್ನಡ

		೬ ಬೆಳಗಾಂ ೧೫ ಉಡುಪಿ ೭ ಬಾಗಲಕೋಟೆ ೧೬ ಶಿವಮೊಗ್ಗ ೮ ಬಿಜಾಪುರ ೧೭ ಚಿಕ್ಕಮಗಳೂರು ೯ ಕೊಡಗು
೮)	ವಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಮಿಷನ್ ನಿಂದ ಒದಗಿಸಿದ ಅನುದಾನವೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)	ವಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಮಿಷನ್ ನಿಂದ ೫ ಕೋಟಿ ರೂ ಗಳ ಅನುದಾನವನ್ನು ಒದಗಿಸಲಾಗಿದೆ ತಾಲ್ಲೂಕುವಾರು ವಿವರಗಳನ್ನು ಕೆಳಗೆ ನೀಡಲಾಗಿದೆ ಕ್ರಮ ಸಂ ಖ್ಯೆ | ತಾಲ್ಲೂಕು | ಅನುದಾನ (ಲಕ್ಷ ರೂ ಗಳಲ್ಲಿ) ಒದಗಿಸುವುದು | ಬಳಕೆಯಾಗಿರುವುದು ೧ | ವಿಜಾಪುರ | ೨೩೬.೧೪ | ೯೯.೨೧ ೨ | ಇಂಡಿ | ೧೦೭.೯೧ | ೪೦.೦೬ ೩ | ಸಿಂದಗಿ | ೭೨.೯೦ | ೧೬.೨೨ ೪ | ಬಸವನ ಬಾಗೇವಾಡಿ | ೭೩.೩೭ | ೨೩.೨೬ ೫ | ಮುದ್ದೇಬಿಹಾಳ | ೫೪.೪೮ | ೧೦.೨೫ | ಒಟ್ಟು | ೫೪೪.೪೨ | ೧೪೯.೦೦
೯)	ತೋಟಗಾರಿಕೆ ಮಿಷನ್ ನಿಂದ ವಿಜಾಪುರ ಜಿಲ್ಲೆಯಲ್ಲಿ	ತೋಟಗಾರಿಕೆ ಮಿಷನ್ ನಿಂದ ವಿಜಾಪುರ ಜಿಲ್ಲೆಯಲ್ಲಿ ೧೪೯ ಕೋಟಿ ರೂ ಗಳ ಅನುದಾನವನ್ನು ಬಳಕೆ ಮಾಡಲಾಗಿದೆ ತಾಲ್ಲೂಕುವಾರು ಬಳಕೆ ಮಾಡಿರುವ ವಿವರವನ್ನು

	ಅನುದಾನವನ್ನು ಬಳಕೆ ಮಾಡಿದ ಪ್ರಮಾಣವೆಷ್ಟು ? (ತಾಲ್ಲೂಕುವಾರು ಅನುದಾನ ಬಳಕೆಯ ಮಾಹಿತಯನ್ನು ಒದಗಿಸುವುದು)	ಮೇಲಿನ "ಅ" ಉತ್ತರದಲ್ಲಿ ನೀಡಲಾಗಿದೆ
ಈ)	ಕೆಲವು ತಾಲ್ಲೂಕುಗಳಲ್ಲಿ ಅನುದಾನವನ್ನು ಸಂಪೂರ್ಣವಾಗಿ ಬಳಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
ಉ)	ಬಾಗೇವಾಡಿ ತಾಲ್ಲೂಕಿನಲ್ಲಿ ಒದಗಿಸಿದ ಅನುದಾನವೇನು? ಹಾಗೂ ಬಳಕೆ ಮಾಡಿದ ಅನುದಾನವೆಷ್ಟು ?	ಬಸವನಬಾಗೇವಾಡಿ ತಾಲ್ಲೂಕಿಗೆ ಒದಗಿಸಿದ ಅನುದಾನ ರೂ ೭೩.೭೭ ಲಕ್ಷ ರೂ ಗಳು ಬಳಕೆ ಮಾಡಿದ ಅನುದಾನ ೨೩.೨೬ ಲಕ್ಷ ರೂ ಗಳು

ಊ)	ಬಳಕೆಯಾಗದೇ ಇರಲು ಕಾರಣವೇನು?	ಅನುದಾನವು ಬಳಕೆಯಾಗದಿರುವ ಕಾರಣಗಳನ್ನು ಕೆಳಕಂಡಂತೆ ವಿವರಿಸಲಾಗಿದೆ ೧ ೨೦೦೫-೦೬ ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮತಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್, ನವ ದೆಹಲಿರವರಿಂದ ಮಾರ್ಚಿ ೨೦೦೬ರಲ್ಲಿ ದೊರಕಿರುತ್ತದೆ ೨೦೦೫-೦೬ ಮತ್ತು ೨೦೦೬-೦೭ನೇ ಸಾಲಿನ ಎರಡೂ ವರ್ಷದ ಕಾರ್ಯಕ್ರಮಗಳನ್ನು ೨೦೦೬-೦೭ನೇ ಸಾಲಿನಲ್ಲಿ ಅಮದರೆ, ಏಪ್ರಿಲ್ ೨೦೦೬ರ ನಂತರ ಅನುಷ್ಠಾನಗೊಳಿಸಲು ಪ್ರಾರಂಭಿಸಲಾಗಿರುತ್ತದೆ ಎರಡೂ ವರ್ಷದ ಕಾರ್ಯಕ್ರಮಗಳನ್ನು ಒಟ್ಟಿಗೆ ಅನುಷ್ಠಾನ ಮಾಡುತ್ತಿರುವುದರಿಂದ, ೨೦೦೬-೦೭ನೇ ಸಾಲಿನ ಪ್ರಗತಿಯು ಕಡಿಮೆ ಇರುತ್ತದೆ ೨ ವಿಜಾಪುರ ಜಿಲ್ಲೆಯಲ್ಲಿ ತಲ್ಲೂಕು ಮಟ್ಟದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆಗಳು ಖಾಲಿ ಇರುತ್ತದೆ ಪಕ್ಕದ ತಾಲ್ಲೂಕಿನ ಅಧಿಕಾರಿಯವರು ಹೆಚ್ಚುವರಿ ಪ್ರಭಾರೆಯನ್ನು ವಹಿಸಿಕೊಂಡಿದ್ದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದಾರೆ ೩ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮದ ಅನುಷ್ಠಾನಕ್ಕೆ ಪ್ರತ್ಯೇಖವಾಗಿಯೇ ಜಿಲ್ಲೆಗೆ Project officer ಹುದ್ದೆಯನ್ನು ಜುಲೈ ೨೦೦೬ ರಿಂದಲೂ ಮತ್ತು ತಾಲ್ಲೂಕಿಗೆ Field Consultant ರವರುಗಳ ಹುದ್ದೆಯನ್ನು

		ಅಕ್ಟೋಬರ್ ೨೦೦೬ ರಿಂದ ತುಂಬಿದ್ದು, ಸದರಿ ಕಾರ್ಯಕ್ರಮವನ್ನು ಹೆಚ್ಚಿನ ಭರದಿಂದ ಅನುಷ್ಠಾನಗೊಳಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೭೯ (೧೮೫೨)

ಸದಸ್ಯರ ಹೆಸರು ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸುವ ಸಚಿವರು ಶ್ರೀ ಬಂಡೆಪ್ಪ ಖಾಶೆಂಪೂರ (ಕೃಷಿ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತ ಮಿತ್ರ ಯೋಜನೆಯಡಿ ಸ್ಥಾಪಿತವಾಗಿರುವ ರೈತ ಸಂಪರ್ಕ ಕೇಂದ್ರಗಳೆಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು)?	ರಾಜ್ಯದಲ್ಲಿ ಒಟ್ಟು ೭೪೫ ರೈತ ಸಮಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ-೧ರಲ್ಲಿ ನೀಡಲಾಗಿದೆ
ಆ)	ವಿಜಾಪುರ ಜಿಲ್ಲೆಯಿಂದ ಹೊಸದಾಗಿ ರೈತ ಸಂಪರ್ಕ ಕೇಂದ್ರಗಳನ್ನು ಪ್ರಾರಂಭಿಸುವಂತೆ ಬಂದಿರುವ ಬೇಡಿಕೆಗಳು ಅಥವಾ ಪ್ರಸ್ತಾವನೆಗಳು ಎಷ್ಟು?	೧೫
ಇ)	ಪ್ರಸ್ತಾವನೆಗೆ ಅನುಗುಣವಾಗಿ ಸರಕಾರ ಕ್ರಮ ಕೈಗೊಂಡಿದೆಯೇ?	ಅಗತ್ಯತೆ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ